# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C No.295/2017
CW-01 PW-01

ಹೆಸರು : ಶರಣಪ್ಪಾ ಕುಂಬಾರ

ತಂದೆ ಹೆಸರು : ಮಲ್ಲಪ್ಪಾ

ವಯಸ್ಸು : 59 ವರ್ಷ

ಉದ್ಯೋಗ : ಪ್ರಭಾರಿ ಪಿಡಿಓ, ನರೋಣಾ ಗ್ರಾಮ ಪಂಚಾಯತಿ

ವಾಸ ಸ್ಥಳ : ಮುಗುಳನಾಗಾಂವ, ತಾಃ ಶಹಾಬಾದ

---

**<u>ಪ್ರಮಾಣವಚನ ಭೋಧಿಲಾಯಿತು. ದಿಃ 26-07-2023</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>**

ನನಗೆ ಚಾಸಾಃ 04 ರಿಂದ 11 ರವರ ಪರಿಚಯ ಇರುತ್ತದೆ. ಅದೇ ರೀತಿ ನ್ಯಾಯಾಲಯದ ಮುಂದೆ ಇರುವ ಆರೋಪಿ ನಂಃ 2 ಮತ್ತು 3 ರವರ ಪರಿಚಯ ಇರುತ್ತದೆ. ಅದೇ ರೀತಿ ಆರೋಪಿ ನಂಃ 1 ರವರ ಪರಿಚಯ ನನಗೆ ಇರುತ್ತದೆ, 1 ನೇ ಆರೋಪಿಯು ಈ ದಿನ ಗೈರು ಹಾಜರು ಇದ್ದು, ಆತನ ಗುರುತಿಸುವಿಕೆಗೆ ಯಾವುದೇ ತಕರಾರು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ನಿವೇದಿಸಿಕೊಂಡಿರುತ್ತಾರೆ.

ನಾನು 2016 ರಿಂದ 2017 ರವರೆಗೆ ಕಂದಗೋಳ ಗ್ರಾಮ ಪಂಚಾಯತಿಯ ಪ್ರಭಾರಿ ಪಿಡಿಓ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನು.

ದಿಃ 29-04-2017 ರಂದು ಆ ದಿನ ಶನಿವಾರ ಆಗಿದ್ದು, ಸದರಿ ದಿನ ಬಸವ ಜಯಂತಿ ಇತ್ತು. ನಾವು ಬಸವ ಜಯಂತಿ ಆಚರಣೆ ಮಾಡಿ, ತಾಲೂಕು ಪಂಚಾಯತಿ, ಚಿತ್ತಾಪೂರಕ್ಕೆ ಬರಬೇಕೆಂದು ನಮ್ಮ ಕಾರ್ಯನಿರ್ವಾಹಕ ಅಧಿಕಾರಿಗಳು ಆದೇಶ ಮಾಡಿದ್ದರಿಂದ, ಆ ದಿನ ನಮ್ಮ ಗ್ರಾಮ ಪಂಚಾಯತಿಯಲ್ಲಿ ನಾವು, ಗ್ರಾಮ ಪಂಚಾಯತಿ ಸದಸ್ಯರು, ಅಧ್ಯಕ್ಷರು ಹಾಗೂ ಗ್ರಾಮ

ಪಂಚಾಯತಿ ಸಿಬ್ಬಂದಿಗಳು ಬಸವ ಜಯಂತಿ ಆಚರಣೆ ಮಾಡಿ, ಲಘು ಉಪಹಾರವನ್ನು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಮಾಡಿರುತ್ತೇವೆ. ನಂತರ ನಮ್ಮ ಮೇಲಾಧಿಕಾರಿಗಳ ಆದೇಶದ ಮೇರೆಗೆ ಎಂಜಿಎನಆರಇಜಿಎ ಉದ್ಯೋಗ ಖಾತಿ ಯೋಜನೆಯಡಿಯಲ್ಲಿ ಎನಎಂಆರ ಶೀಟ ತೆಗೆಯಲು ಚಿತ್ತಾಪೂರಕ್ಕೆ ಬರಲು ಹೊರಟೆನು. ಆಗ 1 ನೇ ಆರೋಪಿಯು ನನ್ನನ್ನು ಅಡ್ಡಗಟ್ಟಿ ಬಸವಜಯಂತಿಯ ಆಚರಣೆ ಮಾಡಲು ನನಗೆ ಹಣ ನೀಡಬೇಕೆಂದು ಕೇಳಿದನು, ನಂತರ ಒತ್ತಾಯ ಮಾಡಿ ನನ್ನನ್ನು ಗ್ರಾಮ ಪಂಚಾಯತಿಯ ಒಳಗೆ ಕೂಡಿಹಾಕಿದ್ದರು. ನಾನು ಆತನನ್ನು ಕುರಿತು ಎಸಿಎಸ್ಟಿ ಜನರಿಗೆ ಹಣ ನೀಡಲು ನನಗೆ ಅವಕಾಶ ಇದ್ದು, ಸಾಮಾನ್ಯ ಜಯಂತಿಗಳಾದ, ಬಸವ ಜಯಂತಿ, ಕನಕದಾಸ ಜಯಂತಿ ಇತ್ಯಾದಿಗಳಿಗೆ ಧನ ಸಹಾಯ ನೀಡಲು ಬರುವುದಿಲ್ಲ ಎಂದು ಹೇಳಿರುತ್ತೇನೆ.

ಅದೇ ರೀತಿ ಫೆಬ್ರವರಿ-2017 ರಂದು ನಮ್ಮ ಗ್ರಾಮ ಪಂಚಾಯತಿಯಲ್ಲಿ ಲೆಕ್ಕ ಪರಿಶೋಧನೆ ಆಗಿದ್ದು, ನಮ್ಮ ಮೇಲಾಧಿಕಾರಿಗಳು ಸದರಿ ಜಯಂತಿಗಳಿಗೆ ಹಣ ನೀಡಲು ಬರುವುದಿಲ್ಲ ಎಂದು ಸಹ ನನಗೆ ಹೇಳಿದ್ದರು.

1 ನೇ ಆರೋಪಿಯು ನನ್ನನ್ನು ಕುರಿತು, ನೀನು ಜಾತಿವಾದಿ ಇದ್ದು, ಕೇವಲ ಎಸಿಎಸ್ಟಿ ಜನರಿಗೆ ಮಾತ್ರ ಹಣ ಸಹಾಯ ಮಾಡುತ್ತಿಯಾ ಎಂಬಿತ್ಯಾದಿಯಾಗಿ ಬೈದು, ಅವಾಚ್ಯ ಶಬ್ದಗಳಿಂದ ನಿಂದಿಸಿ, ನನಗೆ ಹೊಡೆಯಲು ಬಂದಿರುತ್ತಾನೆ. ಆಗ ನಮ್ಮ ಸಿಬ್ಬಂದಿಗಳಾದ ಚಾಸಾಃ 09 ಮತ್ತು 11 ರವರು ಬಂದು ನನ್ನನ್ನು ಅಲ್ಲಿಂದ ಹೊರಗೆ ತಂದು ನನ್ನನ್ನು ರಕ್ಷಿಸಿರುತ್ತಾರೆ.

ನಂತರ 1 ನೇ ಆರೋಪಿ ಹಾಗೂ ನ್ಯಾಯಾಲಯದ ಮುಂದೆ ಇರುವ ಇಬ್ಬರು ಆರೋಪಿಗಳು ನನ್ನ ಮೊಬೈಲನ್ನು ಕಸಿದುಕೊಂಡು, ನನ್ನನ್ನು ಕುರಿತು ನನ್ನ ಅಂಗಿ ಪ್ಯಾಂಟ ಬಿಚ್ಚಿ,

ಮೆಟ್ಟು ಕಟ್ಟಿ ಊರಲ್ಲಿ ಮೆರೆಸಬೇಕು ಎಂದು ನನಗೆ ಬೈದಿರುತ್ತಾರೆ. ಆ ದಿನ ಸಮಯ 12.00 ಗಂಟೆಯಾದಾಗ, ಚಾಸಾಃ 11 ರವರು ಪೊಲೀಸ ಠಾಣೆಗೆ ಕರೆ ಮಾಡಿದಾಗ, ಪಿಎಸ್ಐ, ಕಾಳಗಿ ಠಾಣೆಯರವರು ಬಂದು, ನನ್ನ ಮೊಬೈಲನ್ನು ನನಗೆ ಆರೋಪಿಗಳಿಂದ ವಾಪಸ್ ಪಡೆದುಕೊಂಡು ನನಗೆ ನೀಡಿರುತ್ತಾರೆ. ನನ್ನ ಮೇಲಾಧಿಕಾರಿಗಳು ನನಗೆ ಚಿತ್ತಾಪೂರಕ್ಕೆ ಬರುವುದು ಬೇಡ ಎಂದು ತಿಳಿಸಿದ್ದರ ಮೇರೆಗೆ ನಾನು ಚಿತ್ತಾಪೂರಕ್ಕೆ ಆ ದಿನ ಬರಲ್ಲಿಲ. ನಂತರ ಪಿಎಸ್ಐ ರವರು ನನಗೆ ನನ್ನ ಮನೆಗೆ ಕಳುಹಿಸಿರುತ್ತಾರೆ.

ನಂತರ ನಾನು ಜಿಲ್ಲಾ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಭೇಟಿಯಾಗಿ, ಸದರಿಯವರ ನಿರ್ದೇಶನದ ಪ್ರಕಾರ ದಿಃ 01-05-2017 ರಂದು ಆರೋಪಿಗಳ ವಿರುದ್ದ ಒಂದು ದೂರನ್ನು ನೀಡಿರುತ್ತೇನೆ.

ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ**

ದಿಃ 29-04-2017 ರಂದು ಬೆಳಿಗ್ಗೆ 09.00 ಗಂಟೆ ಸಮಯದಲ್ಲಿ ನಮ್ಮ ಸಿಬ್ಬಂದಿಗಳಾದ ಚಾಸಾಃ 07 ರಿಂದ 11 ರವರು ಮತ್ತು 1 ನೇ ಆರೋಪಿ ಬಸವ ಜಯಂತಿ ಆಚರಣೆಗೋಸ್ಕರ ನಮ್ಮ ಗ್ರಾಮ ಪಂಚಾಯತಿ ಕಚೇರಿಯಲ್ಲಿ ಸೇರಿದ್ದೇವು ಎಂದರೆ ಸರಿ.

1 ನೇ ಆರೋಪಿಯು ಬಸವ ಜಯಂತಿ ಆಚರಣೆಗೋಸ್ಕರ ಸರ್ಕಾರದಿಂದ ಸಹಾಯ ಧನ ನೀಡುವಂತೆ ನನಗೆ ಒತ್ತಾಯಪಡಿಸುತ್ತಿದ್ದನು ಎಂದರೆ ಸರಿ. 1 ನೇ ಆರೋಪಿಯು ಸದರಿ ದಿನ ನನ್ನ ಕುರ್ಚಿಯ ಮೇಲೆ ನನಗೆ ಕೂರಲು ಬಿಡದೇ ನನ್ನನ್ನು ಕುರ್ಚಿಯಿಂದ ದೂಡಿರುತ್ತಾನೆ ಎಂದರೆ ಸರಿ. 1 ನೇ ಆರೋಪಿಯು ನನ್ನನ್ನು ಕುರಿತು ನೀನು ಅಯೋಗ್ಯ ಪಿಡಿಓ ಇದ್ದಿಯಾ ಎಂದು ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾನೆ ಎಂದರೆ ಸರಿ. 1 ನೇ ಆರೋಪಿಯು ನನ್ನನ್ನು ಕುರಿತು ನೀನು ಕುರ್ಚಿಯ ಮೇಲೆ ಕೂರಲು ಯೋಗ್ಯ ಇಲ್ಲ ಎಂದು ನೆಲದ ಮೇಲೆ ಕುಳಿತುಕೋ ಎಂದು ಹೇಳಿರುತ್ತಾನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನನ್ನು ಒಂದು ಗಂಟೆಯ ಅವಧಿಯವರೆಗೆ ಕುರ್ಚಿಯ ಮೇಲೆ ಕೂರಲು ಬಿಟ್ಟಿರುವುದಿಲ್ಲ.

1 ನೇ ಆರೋಪಿಯು ನನಗೆ ಹಣ ನೀಡುವಂತೆ ಮತ್ತು ಹಣ ಕೊಡದಿದ್ದರೇ ನಿನ್ನನ್ನು ಬಿಡುವುದಿಲ್ಲ ಎಂದು ನನ್ನ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾನೆ ಎಂದರೆ ಸರಿ. ಪಿಎಸ್ಐ ರವರು ಬಂದ ನಂತರ 1 ನೇ ಆರೋಪಿಯು ನನಗೆ ಜೀವಬೆದರಿಕೆ ಹಾಕಿರುತ್ತಾನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಜಿ.ಎಸ್.ವಕೀಲರಿಂದಃ**

ನಿಪಿ-1 ರಲ್ಲಿ ನನ್ನ ಜಾತಿ ನಮೂದಿಸಿರುವುದಿಲ್ಲ ಎಂದರೆ ಸರಿ. 1 ನೇ ಆರೋಪಿಯು ಕಂದಗೋಳ ಗ್ರಾಮ ಪಂಚಾಯತಿಯ ಸದಸ್ಯ ಆಗಿರುತ್ತಾನೆ ಎಂದರೆ ಸರಿ. 1 ನೇ ಆರೋಪಿ ಲಿಂಗಾಯತ ಜಾತಿಗೆ ಸೇರಿದವನಾಗಿರುತ್ತಾನೆ ಎಂದರೆ ಸರಿ.

ಸಾಮಾನ್ಯವಾಗಿ ಗ್ರಾಮ ಪಂಚಾಯತಿಯಲ್ಲಿ ಯಾವುದೇ ರಾಷ್ಟ್ರೀಯ ದಿನಾಚರಣೆ, ಯಾವುದೇ ಜಯಂತಿ ಮಾಡುವ ಮೊದಲು ಎಲ್ಲಾ ಸದಸ್ಯರಿಗೆ ನೋಟಿಸ್ ನೀಡಬೇಕಾಗುತ್ತದೆ ಎಂದರೆ ಸರಿ.

ಮೆಟ್ಟು ಕಟ್ಟಿ ಊರಲ್ಲಿ ಮೆರೆಸಬೇಕು ಎಂದು ನನಗೆ ಬೈದಿರುತ್ತಾರೆ. ಆ ದಿನ ಸಮಯ 12.00 ಗಂಟೆಯಾದಾಗ, ಚಾಸಾಃ 11 ರವರು ಪೊಲೀಸ ಠಾಣೆಗೆ ಕರೆ ಮಾಡಿದಾಗ, ಪಿಎಸ್‌ಐ, ಕಾಳಗಿ ಠಾಣೆಯರವರು ಬಂದು, ನನ್ನ ಮೊಬೈಲನ್ನು ನನಗೆ ಆರೋಪಿಗಳಿಂದ ವಾಪಸ್ ಪಡೆದುಕೊಂಡು ನನಗೆ ನೀಡಿರುತ್ತಾರೆ. ನನ್ನ ಮೇಲಾಧಿಕಾರಿಗಳು ನನಗೆ ಚಿತ್ತಾಪೂರಕ್ಕೆ ಬರುವುದು ಬೇಡ ಎಂದು ತಿಳಿಸಿದ್ದರ ಮೇರೆಗೆ ನಾನು ಚಿತ್ತಾಪೂರಕ್ಕೆ ಆ ದಿನ ಬರಲ್ಲಿಲ. ನಂತರ ಪಿಎಸ್‌ಐ ರವರು ನನಗೆ ನನ್ನ ಮನೆಗೆ ಕಳುಹಿಸಿರುತ್ತಾರೆ.

ನಂತರ ನಾನು ಜಿಲ್ಲಾ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಭೇಟಿಯಾಗಿ, ಸದರಿಯವರ ನಿರ್ದೇಶನದ ಪ್ರಕಾರ ದಿಃ 01-05-2017 ರಂದು ಆರೋಪಿಗಳ ವಿರುದ್ದ ಒಂದು ದೂರನ್ನು ನೀಡಿರುತ್ತೇನೆ.

ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ</u>**

ದಿಃ 29-04-2017 ರಂದು ಬೆಳಿಗ್ಗೆ 09.00 ಗಂಟೆ ಸಮಯದಲ್ಲಿ ನಮ್ಮ ಸಿಬ್ಬಂದಿಗಳಾದ ಚಾಸಾಃ 07 ರಿಂದ 11 ರವರು ಮತ್ತು 1 ನೇ ಆರೋಪಿ ಬಸವ ಜಯಂತಿ ಆಚರಣೆಗೋಸ್ಕರ ನಮ್ಮ ಗ್ರಾಮ ಪಂಚಾಯತಿ ಕಚೇರಿಯಲ್ಲಿ ಸೇರಿದ್ದೇವು ಎಂದರೆ ಸರಿ.

ನಾನು ಸದರಿ ದಿನ ಬಸವ ಜಯಂತಿ ಆಚರಣೆಯ ಬಗ್ಗೆ 1ನೇ ಆರೋಪಿಗೆ ಯಾವುದೇ ನೋಟಿಸ್‌ನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ. ನಾನು 1ನೇ ಆರೋಪಿಗೆ ಬಸವ ಜಯಂತಿ ಆಚರಣೆಯ ಬಗ್ಗೆ ನೀಡಿದ ನೋಟಿಸಿನ ಸ್ವೀಕೃತಿಯ ಪ್ರತಿಯನ್ನು ಪೊಲೀಸರಿಗೆ ಹಾಜರುಪಡಿಸಿರುವುದಿಲ್ಲ. ನಾನು 1ನೇ ಆರೋಪಿಗೆ ಬಸವ ಜಯಂತಿಯ ಆಚರಣೆಯ ಸಮಯವನ್ನು ನೋಟಿಸ್ ನ ಮೂಲಕ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಮ್ಮ ಗ್ರಾಮ ಪಂಚಾಯತಿಯಲ್ಲಿ ಸದಸ್ಯನಾಗಿದ್ದ 1ನೇ ಆರೋಪಿಗೆ ಶಿಷ್ಟಾಚಾರದ ಪ್ರಕಾರ ಯಾವುದೇ ಸಭೆಗೆ ಹಾಜರಾಗುವಂತೆ ಯಾವುದೇ ನೋಟಿಸನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಯು ಸದರಿ ವಿಚಾರ ಬಗ್ಗೆ ನನಗೆ ಕೇಳಲು ಬಂದಾಗ, ನಾನು ಆತನ ವಿರುದ್ದ ದಬ್ಬಾಳಿಕೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಬಸವ ಜಯಂತಿ ಆಚರಣೆ ಮಾಡುವಂತೆ ಕಾರ್ಯ ನಿರ್ವಾಹಕ ಅಧಿಕಾರಿಗಳು ನನಗೆ ಮೌಖಿಕವಾಗಿ ಆದೇಶವನ್ನು ನೀಡಿದ್ದರು. ಕಾರ್ಯ ನಿರ್ವಾಹಕ ಅಧಿಕಾರಿಗಳು ಯಾವುದೇ ಆದೇಶವನ್ನು ನೀಡದೇ ಇದ್ದರೂ ನನ್ನ ಅಧಿಕಾರ ದುರುಪಯೋಗಪಡಿಸಿಕೊಂಡು ನಾನು ಬಸವ ಜಯಂತಿಯನ್ನು ನನ್ನ ಇಷ್ಟಕ್ಕೆ ಅನುಸಾರವಾಗಿ ಆಚರಿಸಿರುತ್ತೇನೆ ಎಂದರೆ ಸರಿಯಲ್ಲ.

1ನೇ ಆರೋಪಿಯ ಕ್ಷೇತ್ರದಲ್ಲಿ ಎಂಜಿಎನಆರಇಜಿಎ ಯೋಜನೆಯಡಿಯಲ್ಲಿ ಆತನಿಗೆ ತಿಳಿಸದೇ ಆತನ ಕ್ಷೇತ್ರಕ್ಕೆ ಅನ್ಯಾಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಭೆಯಲ್ಲಿ 1ನೇ ಆರೋಪಿಗೆ ಎನಎಂಆರ ಯೋಜನೆಗೆ ವೆಚ್ಚ ಮಾಡಿದ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಎನಎಂಆರ ವೆಚ್ಚವನ್ನು 1ನೇ ಆರೋಪಿಗೆ ತಿಳಿಸದೇ ಆತನಿಗೆ ವಿರುದ್ಧವಾಗಿ ನಾನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

1 ನೇ ಆರೋಪಿಯು ಎನಎಂಆರ ವೆಚ್ಚದ ಸಂಬಂಧ ವೆಚ್ಚವನ್ನು ಕೇಳಿದಾಗ ಆತನಿಗೆ ಸರಿಯಾಗಿ ಮಾಹಿತಿ ನೀಡದೇ ಆತನ ಮೇಲೆ ದ್ವೇಷ ಸಾಧನೆ ಮಾಡಲು 1 ನೇ ಆರೋಪಿ, 2 ಮತ್ತು 3 ನೇ ಆರೋಪಿಗಳ ವಿರುದ್ದ ಒಂದು ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ-1 ರಲ್ಲಿ ಸದರಿ ದಿನ ಗ್ರಾಮ ಪಂಚಾಯತಿ ಸದಸ್ಯರು ಹಾಜರಿರುವ ಬಗ್ಗೆ ನಾನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಕಂದಗೋಳ ಗ್ರಾಮದಿಂದ ಕಾಳಗಿ ಪೊಲೀಸ ಠಾಣೆ 30 ಕಿ.ಮೀ ಅಂತರದಲ್ಲಿರುತ್ತದೆ.

ಸಾಮಾನ್ಯ ಜಯಂತಿಗಳಿಗೆ ಹಣ ವೆಚ್ಚ ಮಾಡಬಾರದು ಎಂದು ಸರ್ಕಾರದಿಂದ ಆದೇಶ ಆಗಿದ್ದು ಅದನ್ನು ನಾನು ಸದಸ್ಯರುಗಳಿಗೆ ಮೌಖಿಕವಾಗಿ ತಿಳಿಸಿರುತ್ತೇನೆ. ನಾನು ಸದರಿ ಆದೇಶಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಲೆಕ್ಕ ಪರಿಶೋಧಕರು ಸದರಿ ವಿಷಯದ ಬಗ್ಗೆ ನಮಗೆ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ.

ಲೆಕ್ಕ ಪರಿಶೋಧಕರು ಸದರಿ ವಿಷಯದ ಬಗ್ಗೆ ತಿಳಿಸಿದ್ದನ್ನು ನಾನು ನೋಟಿಸ್ ಬೋರ್ಡನಲ್ಲಿ ಹಾಕಿದ್ದೇನು. ಸದರಿ ವಿಷಯವನ್ನು ನಾನು ನಿಪಿ-1 ರಲ್ಲಿ ಬರೆದಿರುವುದಿಲ್ಲ ಎಂದರೆ ಸರಿ.

ದಿಃ 29-04-2017 ರಂದು ಬಸವ ಜಯಂತಿಯನ್ನು ನನ್ನ ಇಚ್ಛೆಗೆ ಅನುಗುಣವಾಗಿ ಆಚರಿಸಿದ್ದರಿಂದ ಕಂದಗೋಳ ಗ್ರಾಮ ಪಂಚಾಯತಿಯ ಸದಸ್ಯರು ನನಗೆ ವಿರೋಧ ವ್ಯಕ್ತಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಸಾರ್ವಜನಿಕರು ಸಹ ಸದರಿ ಬಸವ

ಜಯಂತಿ ಆಚರಣೆಗೆ ವಿರೋಧ ವ್ಯಕ್ತಪಡಿಸಿದ್ದು, ನಾನು ಕೇವಲ ಆರೋಪಿಗಳ ವಿರುದ್ದ ಒಂದು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಸಾರ್ವಜನಿಕರು ಸದರಿ ವಿಷಯದ ಬಗ್ಗೆ ನನಗೆ ಪ್ರಶ್ನಿಸಲಾಗಿ, ನನಗೆ ಯಾವುದೇ ಉತ್ತರ ನೀಡಲು ಆಗದೇ ಇದ್ದುದ್ದರಿಂದ ನಾನು ಆರೋಪಿಗಳ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಸದರಿ ದಿನ ಬಸವ ಜಯಂತಿ ಕಾರ್ಯಕ್ರಮ ಆಚರಣೆ ಮಾಡಲು ಸುಮಾರು 50-60 ಜನ ಹಾಜರಿದ್ದರು.

1 ರಿಂದ 3 ನೇ ಆರೋಪಿಗಳು ನನ್ನ ಕರ್ತವ್ಯಕ್ಕೆ ಅಡ್ಡಿಪಡಿಸಿ, ನನ್ನನ್ನು ಕುರ್ಚಿಯ ಮೇಲೆ ಕೂರಲು ಬಿಡದೇ, ನನ್ನನ್ನು ಒಂದು ಕೋಣೆಯಲ್ಲಿ ಕೂಡಿಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಆರೋಪಿಯು ನನ್ನ ವಿರುದ್ದ ಬಸವ ಜಯಂತಿ ಆಚರಣೆಯ ಸಂಬಂಧ ಮೌಖಿಕವಾಗಿ ದೂರನ್ನು ನನ್ನ ಮೇಲಾಧಿಕಾರಿಗಳಿಗೆ ನೀಡಿರುತ್ತಾನೆ ಎಂದರೆ ಸರಿಯಲ್ಲ. ನಾನು ಗ್ರಾಮ ಪಂಚಾಯತಿಯ ಎನಎಂಆರ ಕಾಮಗಾರಿಯಲ್ಲಿ ಲೆಕ್ಕಪತ್ರಗಳನ್ನು ಸರಿಯಾಗಿ ನೀಡದೇ ಇದ್ದುದ್ದರಿಂದ ಗ್ರಾಮ ಪಂಚಾಯತಿಯ ಸದಸ್ಯರು ನನಗೆ ವಿರೋಧ ವ್ಯಕ್ತಪಡಿಸಿದ್ದರು ಎಂದರೆ ಸರಿಯಲ್ಲ. ಪಿಎಸ್ಐರವರು ಗ್ರಾಮ ಪಂಚಾಯತಿಗೆ ಬಂದು ನನ್ನ ಮೋಬೈಲನ್ನು ಆರೋಪಿಗಳಿಂದ ವಾಪಸ್ ಪಡೆದುಕೊಂಡು ನನಗೆ ನೀಡಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಆರೋಪಿಯು ಚುನಾಯಿತ ಸದಸ್ಯನಾಗಿದ್ದು ಆತನಿಗೆ ಗ್ರಾಮ ಪಂಚಾಯತಿಯ ವ್ಯವಹಾರದ ಬಗ್ಗೆ ಕೇಳುವ ಹಕ್ಕು ಇದ್ದು, ಆತನು ಸದರಿ ವಿಷಯದ ಬಗ್ಗೆ ಕೇಳಿದಾಗ ಆತನ ವಿರುದ್ದ ದ್ವೇಷ ಸಾಧನೆಗಾಗಿ, ಆತನ ಹಾಗೂ 2 ಮತ್ತು 3 ನೇ ಆರೋಪಿಗಳ ವಿರುದ್ದ ಒಂದು ಸುಳ್ಳು ದೂರನ್ನು ನೇಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು 2 ಮತ್ತು 3 ನೇ ಆರೋಪಿಗಳನ್ನು ಸದರಿ ದಿನ ಗ್ರಾಮ ಪಂಚಾಯತಿ ಕರೆಯಿಸಿಕೊಂಡಿದ್ದ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಜೆ. ಎಂ. ಎಫ್.ಸಿ. ಚಿತ್ತಾಪೂರ.

<u>**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ**</u>

C.C No.295/2017
CW-02 PW-02

ಹೆಸರು ಃ ಮಲ್ಲಿನಾಥ ಕುರಿ

ತಂದೆ ಹೆಸರು ಃ ಚಂದ್ರಾಮ

ವಯಸ್ಸು ಃ 51 ವರ್ಷ

ಉದ್ಯೋಗ ಃ ಒಕ್ಕಲುತನ

ವಾಸ ಸ್ಥಳ ಃ ಕಂದಗೋಳ ಗ್ರಾಮ

---

<u>**ಪ್ರಮಾಣವಚನ ಭೋಧಿಲಾಯಿತು. ದಿಃ 26-07-2023**</u>

<u>**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ**</u>

ನನಗೆ ಚಾಸಾಃ 03 ರವರ ಪರಿಚಯ ಇರುತ್ತದೆ.

ದಿಃ 29-04-2017 ರಂದು ಬೆಳಿಗ್ಗೆ 09.30 ಗಂಟೆ ಸಮಯದಲ್ಲಿ ಬಸವ ಜಯಂತಿ ಆಚರಣೆ ಮುಗಿದಿದ್ದು, ನಂತರ ಎರಡು ದಿನಗಳ ನಂತರ ಚಾಸಾಃ 13 ರವರು ಮಧ್ಯಾಹ್ನ 02.00 ಗಂಟೆಗೆ ನಮ್ಮ ಗ್ರಾಮಕ್ಕೆ ಬಂದು, ಚಾಸಾಃ 11 ರವರು ತೋರಿಸಿದ ಜಾಗದಲ್ಲಿ ನನ್ನ ಸಮಕ್ಷಮ ಒಂದು ಪಂಚನಾಮೆ ಕ್ರಮವನ್ನು ಜರುಗಿಸಿರುತ್ತಾರೆ. ಸಾಕ್ಷಿಯು ಘಟನಾ ಸ್ಥಳದ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2 (ಎ) ಎಂದು ಗುರುತಿಸಲಾಯಿತು.

ಬಸವೇಶ್ವರ ಜಯಂತಿಯ ದಿನದಂದು ಜಯಂತಿ ಮಾಡಲು ಅನುದಾನದ (ಸಹಾಯ ಧನ) ಸಂಬಂಧ ಗಲಾಟೆ ಆಗಿದ್ದರ ಬಗ್ಗೆ ಸದರಿ ದಿನ ಪೊಲೀಸರು ನನ್ನ ಸಮಕ್ಷಮ ಘಟನಾ ಸ್ಥಳದ ಪಂಚನಾಮೆ ಕ್ರಮವನ್ನು ಜರುಗಿಸಿರುತ್ತಾರೆ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಭಾಗಶಃ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ**

ದಿಃ 02-05-2017 ರಂದು ಮಧ್ಯಾಹ್ನ 02.00 ರಿಂದ 03.00 ಗಂಟೆ ಸಮಯದವರೆಗೆ ನಿಪಿ-2 ರಂತೆ ಘಟನಾ ಸ್ಥಳದ ಪಂಚನಾಮೆಯನ್ನು ಪೊಲೀಸರು ನನ್ನ ಮತ್ತು ಚಾಸಾಃ 03 ರವರ ಸಮಕ್ಷಮ ಜರುಗಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಜಿ.ಎಸ್. ವಕೀಲರಿಂದ**

ನಿಪಿ-2 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪೊಲೀಸರು ನಿಪಿ-2 ಕ್ಕೆ ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ಗಲಾಟೆ ಆಯಿತು ಎನ್ನಲಾದ ಎರಡು ದಿನಗಳ ನಂತರ ಪೊಲೀಸರು ನಮ್ಮ ಗ್ರಾಮಕ್ಕೆ ಬಂದಿದ್ದರು.

ನನಗೆ ಗಲಾಟೆ ಯಾವ ಕಾರಣಕ್ಕಾಗಿ ಆಯಿತು ಎಂದು ನಿಖರವಾಗಿ ಗೊತ್ತಿರುವುದಿಲ್ಲ. 1 ನೇ ಆರೋಪಿ ಪರಿಚಯ ನನಗೆ ಇರುತ್ತದೆ.

ನನ್ನ ಸಮಕ್ಷಮ ನಿಪಿ-2 ರಂತೆ ಯಾವುದೇ ಪಂಚನಾಮೆ ಕ್ರಮ ಪೊಲೀಸರು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ನಿಪಿ-2 ಕ್ಕೆ ಘಟನಾ ಸ್ಥಳದಲ್ಲಿ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತನ್ನು ಕೇಳಿ ನಾನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ನೀಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಜೆ. ಎಂ. ಎಫ್.ಸಿ. ಚಿತ್ತಾಪೂರ.